**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 01 K–ಪ್ರಥಮ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 100** **ಸಮಯ : 03.15ಗಂಟೆಗಳು**

****************************************************************************************

**ಅಭ್ಯಾಸ ಪತ್ರಿಕೆ–5**

****************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ;** **6*1=6**

1. 'ಜ್, ಞ್, ಣ್,ನ್, ಮ್' ಅಕ್ಷರಗಳು ವರ್ಣಮಾಲೆಯ ಈ ವಿಧಕ್ಕೆ ಸೇರಿವೆ
   ಎ) ಅಲ್ಪಪ್ರಾಣ ಬಿ) ಮಹಾಪ್ರಾಣ
   ಸಿ) ಅನುನಾಸಿಕಗಳು ಡಿ) ಸ್ವರಗಳು
2. ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು ಹೀಗೆನ್ನುವರು
   ಎ) ಗಣ ಬಿ) ಪ್ರಾಸ
   ಸಿ) ಮಾತ್ರೆ ಡಿ) ಯತಿ
3. ಚಿನ್ನವಿಲ್ಲದೆ ಬದುಕಬಹುದು, ಅನ್ನವಿಲ್ಲದೆ ಬದುಕಲಾದೀತೆ –ಈ ವಾಕ್ಯದ ಕೊನೆಯಲ್ಲಿ ಬಳಸಬೇಕಾದ ಲೇಖನ ಚಿಹ್ನೆ
   ಎ) ಉದ್ಧರಣ ಬಿ) ಪ್ರಶ್ನಾರ್ಥಕ
   ಸಿ) ಆವರಣ ಡಿ) ವಿವರಣ
4. 'ಕಪ್ಪು' ಪದವು ಉದಾಹರಣೆಯಾಗಿರುವ ವ್ಯಾಕರಣಾಂಶ
   ಎ) ತದ್ಧಿತಾಂತವ್ಯಯ ಬಿ) ಕೃದಂತಭಾವನಾಮ
   ಸಿ) ತದ್ಧಿತಾಂತನಾಮ ಡಿ) ತದ್ಧಿತಾಂತಭಾವನಾಮ
5. 'ಅವನು ವಿದ್ಯೆಯಲ್ಲಿ ಬಲು ಜಾಣ'– ಇಲ್ಲಿರುವ ಸರ್ವನಾಮ ಪದ
   ಎ) ವಿದ್ಯೆ ಬಿ) ಬಲು
   ಸಿ) ಅವನು ಡಿ) ಜಾಣ
6. 'ಸಮ್ಮನೆ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ
   ಎ) ಸಾಮಾನ್ಯಾವ್ಯಯ ಬಿ) ಕ್ರಿಯಾರ್ಥಕಾವ್ಯಯ
   ಸಿ) ಅವಧಾರಣಾರ್ಥಕಾವ್ಯಯ ಡಿ) ಸಂಬಂಧಾರ್ಥಕಾವ್ಯಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ;** **4*1=4**

7. ಬರೆದಳು: ಭೂತಕಾಲ :: ಬರೆಯುವಳು : ..........................
8. ಕುಠಾರ : ಕೊಡಲಿ :: ದ್ಯೂತ : ..........................................
9. ಸಾಕ್ಷಿಮಾಡಿ: ಕ್ರಿಯಾಸಮಾಸ :: ಪಂಚಭೂತ : ....................
10. ದೇವೇಂದ್ರ : ಅಂಕಿತನಾಮ :: ವೈದ್ಯ : ............................

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ;** **7*1=7**

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
12. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ?

13. ಸ್ವಧರ್ಮದ ವಿಷಯದಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದು ಯಾವುದು?
14. ದುಷ್ಟಬುದ್ಧಿಯ ತಂದೆಯ ಹೆಸರೇನು?
15. ಕಾಡುಮೇಡುಗಳ ಸ್ಥಿತಿ ಹೇಗಿದೆ?
16. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?
17. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ; 10*2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
19. 'ಸ್ಟೋನ ಆಫ್ ಸ್ಟೋನ್'ನ ವಿಶೇಷತೆಯೇನು?
20. ಋಣಕ್ಕೂ ಧರ್ಮಕ್ಕೂ ಇರುವ ಸಂಬಂಧವೇನು?
21. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?
22. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
23. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಮುದ್ದಣ ಕವಿ ಗೋವಿಂದ ಪೈ ಅವರಿಗೆ ಏನೆಂದು ಸಲಹೆ ಕೊಟ್ಟರು?
27. ಮೂವರು ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸಲು ಬ್ರಿಟಿಷರು ಕೊಟ್ಟ ಕಾರಣ ಏನು?

**V.ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ; 2*3=6**

28. ವಿದ್ಯಾವಾಚಸ್ಪತಿ ಡಾ.ಬನ್ನಂಜೆ ಗೋವಿಂದಾಚಾರ್ಯ.
29. ಕುಮಾರವ್ಯಾಸ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ; 1*3=3**

30. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ।
ನೊರ್ವನೇ ವೀರನಾತನ ಯಜ್ಞ ತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ; 1*3=3**

31. "ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ".

**VIII. ಕಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ; 1*3=3**

32. "ಮನಸ್ಸಿದ್ದರೆ ಮಾರ್ಗ".
ಅಥವಾ
"ಕೂಡಿಬಾಳಿದರೆ ಸ್ವರ್ಗ ಸುಖ".

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ; 6*3=18**

33. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"
34. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು".
35. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ".
36. "ಹೊಡೆದರೂ ಗುಂಡ ಕರುಣ ಇಲ್ಲದ್ಹಂಗ".
37. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್".
38. "ಜಾನಕಿಯ ಮಗನಿದಕೆ ಬೆದರುವನೆ".

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ;** **1*4=4**

**39**. ಅಂತೆಂಬನಾರ್ಗೆ..................................... ಒಡವೆಯನರ್ಥಿಗಿತ್ತೆ .........................................

........................................................................ **ಅಥವಾ** ........................................................................

........................................................................ ........................................................................

..........................................................ನುಡಿದಂ ..................................................ಕುಂಭಸಂಭವ.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ;** **1*4=4**

40. ಯುಗ-ಯುಗಗಳ ಹಣಿ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ;** **2*4=8**

41. ಆದರ್ಶ ವ್ಯಕ್ತಿ ದೋಷರಹಿತನಾಗಿರಬೇಕಾದ್ದು ಮುಖ್ಯ, ಏಕೆ?

ಅಥವಾ

ತಿಲಕರು ಮತ್ತು ಶಿವಾಜಿಯವರನ್ನು ಜನ ಹೇಗೆ ಸ್ವೀಕರಿಸಿದ್ದಾರೆ? ಈ ಬಗ್ಗೆ ಲೇಖಕರು ಯಾವ ಅಭಿಪ್ರಾಯ ತಳೆದಿದ್ದಾರೆ?

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ?

ಅಥವಾ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ;** **1*4=4(2+2)**

43. ನೇತಾಜಿ ಸುಭಾಷ್‌ಚಂದ್ರ ಬೋಸ್‌ರು ಹೊರದೇಶಗಳಲ್ಲಿ ದೊಡ್ಡ ಸೈನ್ಯ ಕಟ್ಟಿ ಧೈರ್ಯ, ಸಾಹಸ, ದಿಟ್ಟತನದಿಂದ ಬ್ರಿಟಿಷರ ವಿರುದ್ಧ ಹೋರಾಡಿದರು. "ಗುಲಾಮರಂತೆ ನೂರು ವರ್ಷ ಬದುಕುವುದಕ್ಕಿಂತ ಸ್ವತಂತ್ರ ಜೀವಿಗಳಾಗಿ ಒಂದು ವರ್ಷ ಬದುಕುವುದೇ ಲೇಸು, ದೇಶ ಪ್ರೇಮಿಗಳೇ ನನಗೆ ನಿಮ್ಮ ಶಕ್ತಿ ಕೊಡಿ. ನಾನು ನಿಮಗೆ ಸ್ವತಂತ್ರ ಭಾರತವನ್ನು ನೀಡುತ್ತೇನೆ. ಸ್ವಾತಂತ್ರ್ಯ ಬೇಡಿ ಪಡೆಯುವ ವಸ್ತುವಲ್ಲ, ರಕ್ತ ಹರಿಸಿ ಬಲಿದಾನ ಮಾಡಿ ಪಡೆಯುವ ವಸ್ತು". ಎಂದು ಮೊದಲಾಗಿ ಹೇಳಿ ಹುರುದುಂಬಿಸುತ್ತಾ "ಜೈಹಿಂದ್". ಘೋಷಣೆ ಹುಟ್ಟು ಹಾಕಿ ಹೆಜ್ಜೆ ಹೆಜ್ಜೆಗೂ ಗಂಡಾಂತರಗಳನ್ನು ಎದುರಿಸುತ್ತಾ ಮುಂದೆ ಸಾಗಿದರು. ಬರ್ಮಾ ಭಾಗದಲ್ಲಿ ಯುದ್ಧ ಸಾಗುತಿತ್ತು. ಬ್ರಿಟಿಷರ ಕುಟಿಲೋಪಾಯಗಳಿಂದಾಗಿ ಐ.ಎನ್.ಎ. ಸೈನ್ಯಕ್ಕೆ ಆಹಾರ ಪದಾರ್ಥಗಳ ಅಭಾವವುಂಟಾಯಿತು. ಯುದ್ಧೋಪಕರಣಗಳು ಸಾಲದೇ ಹೋದವು. ಅತ್ತ ಜಪಾನ್, ಜರ್ಮನಿ, ಇಟಲಿ ಸೋಲನುಭವಿಸಲು ಆರಂಭವಾಯಿತು. 1945ನೇ ಆಗಸ್ಟ್ 18ರಂದು ಯುದ್ಧೋಪಕರಣಗಳನ್ನು ತರಲು ರಾಜತಾಂತ್ರಿಕ ಕೆಲಸಕ್ಕಾಗಿ ವಿಮಾನದಲ್ಲಿ ಹೊರಟ ಸುಭಾಷರು ಅಪಘಾತದಲ್ಲಿ ವಿಧಿವಷರಾದರು.

ಪ್ರಶ್ನೆಗಳು:

ಅ) ಸುಭಾಷ್‌ಚಂದ್ರ ಬೋಸ್‌ರು ಭಾರತೀಯ ಯುವಕರಿಗೆ ಏನಂದು ಕರೆ ನೀಡಿದರು?

ಆ) ಐ.ಎನ್.ಎ. ಸೈನ್ಯದ ಸೋಲಿಗೆ ಕಾರಣವೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ;** **1*5=5**

44. ನಿಮ್ಮನ್ನು ಉಡುಪಿ ಸರ್ಕಾರಿ ಪ್ರೌಢಶಾಲೆಯ 'ವೇದ' ಎಂದು ಭಾವಿಸಿಕೊಂಡು 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ' ಬ್ಯಾಂಕಿನ ವ್ಯವಸ್ಥಾಪಕರಿಗೆ ನಿಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದು ಕೊಡುವಂತೆ ಕೋರಿ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕೋಲಾರದ ಜ್ಞಾನಜ್ಯೋತಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸಂಕಲ್ಪ' ಎಂದು ಭಾವಿಸಿ ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ನಿಮ್ಮ ಸ್ನೇಹಿತನಿಗೊಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1*5=5**

45. ಸಾಮಾಜಿಕ ಜಾಲತಾಣಗಳ ಸದ್ಬಳಕೆ

ಅಥವಾ

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

※※※※※